SC 1/2021
PW.13

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 1/2021** **ಅ.ಸಾ.13**

**ಚಾ.ಸಾ.23**

| | | |
|---|---|---|
| ಸಾಕ್ಷಿದಾರರ ಹೆಸರು | - | ವಿಶ್ವನಾಥ ಶೆಟ್ಟಿ |
| ತಂದೆಯ ಹೆಸರು | - | ಲೇಟ್ ಮಂಜುನಾಥ ಶೆಟ್ಟಿ |
| ವಯಸ್ಸು | - | 36 ವರ್ಷ |
| ಉದ್ಯೋಗ | - | ಪಿ.ಸಿ.2430 |
| ವಿಳಾಸ | - | ಉಡುಪಿ ನಗರ ಪೋಲಿಸ್ ಠಾಣೆ . |

ದಿನಾಂಕಃ 05-04-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು 2017 ರಿಂದ ಉಡುಪಿ ನಗರ ಠಾಣೆಯಲ್ಲಿ ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 13-02-2020 ರಂದು ಪ್ರಕರಣದ ತನಿಖಾಧಿಕಾರಿಯು ನಾನು ಉಪಯೋಗಿಸುತ್ತಿದ್ದ ಕ್ಯಾಮರಾವನ್ನು ತೆಗೆದುಕೊಂಡು ತನಿಖೆಗೆ ಸಹಕರಿಸುವಂತೆ ಕೋರಿಕೊಂಡ ಮೇರೆಗೆ ನಾನು ತನಿಖಾಧಿಕಾರಿಯೊಂದಿಗೆ ಘಟನಾ ಸ್ಥಳಕ್ಕೆ ಹೋಗಿದ್ದು, ಘಟನಾ ಸ್ಥಳವನ್ನು ಪರಿಶೀಲಿಸುವಾಗ ನನ್ನ ಕ್ಯಾಮರಾದಲ್ಲಿ ಛಾಯಾ ಚಿತ್ರಗಳನ್ನು ತೆಗೆದು ತನಿಖಾಧಿಕಾರಿಗೆ ನೀಡಿರುತೇನೆ. ಛಾಯಾ ಚಿತ್ರಗಳನ್ನು ಈಗಾಗಲೇ ನಿಪಿ.2 ರಿಂದ 4, 6 ರಿಂದ 8 ಎಂದು ಗುರುತಿಸಲಾಗಿದೆ. ಈ ಬಗ್ಗೆ ನಾನು ಕಲಂ 65 ಬಿ ಸಾಕ್ಷ್ಯ ಅಧಿನಿಯಮದಡಿ ದೃಢೀಕರಣ ಪತ್ರ ನೀಡಿರುತ್ತೇನೆ. ದೃಢೀಕರಣ ಪತ್ರವನ್ನು ನಿಪಿ.36 ಎಂದು, ಸಾಕ್ಷಿಯ ಸಹಿಯನ್ನು ನಿಪಿ.36(ಎ) ಎಂದು ಗುರುತಿಸಲಾಯಿತು. ಕ್ಯಾಮರಾವನ್ನು ನಾನೇ ಉಪಯೋಗಿಸುತ್ತಿದ್ದು ಅದು ಸುಸ್ಥಿತಿಯಲ್ಲಿತ್ತು.

**<u>ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಎಸ್.ಪಿ.ಎನ್. ವಕೀಲರಿಂದಃ</u>**

ನನಗೆ ಛಾಯಾ ಚಿತ್ರ ತೆಗೆಯುವ ಬಗ್ಗೆ ಪರಿಣತಿ ಇದೆ. ಈ ಬಗ್ಗೆ ನನಗೆ ತರಬೇತಿ ನೀಡಿರುತ್ತಾರೆ. ನನಗೆ ಯಾವುದೇ ತರಬೇತಿ ಇಲ್ಲ ಎಂದರೆ ಸರಿಯಲ್ಲ. ದೃಢೀಕರಣ ಪತ್ರವನ್ನು ನೀಡಿಯೇ ಇಲ್ಲ ಎಂದರೆ ಸರಿಯಲ್ಲ. ಕ್ಯಾಮರಾದ ಸಾಮರ್ಥ್ಯದ ಬಗ್ಗೆ ನಿಪಿ.36 ರಲ್ಲಿ ನಮೂದು ಮಾಡಿಲ್ಲ. ಯಾವ ಕಂಪ್ಯೂಟರ್ ಗೆ ಪೋಟೋಗಳನ್ನು ಡೌನ್ ಲೋಡ್ ಮಾಡಿದ್ದೇನೆ ಎಂದು ನಮೂದಿಸಿಲ್ಲ. ಪೋಟೋಗಳನ್ನು ಸಿಡಿ ಗೆ ಮಾತ್ರ ವರ್ಗಾಯಿಸಿರುತ್ತೇನೆ. ನಿಪಿ.36 ರಲ್ಲಿ ಸಿಡಿ/ಪೆನ್ ಡ್ರೈವ್/ಮೆಮೋರಿ ಕಾರ್ಡ್/ ಹಾರ್ಡ್ ಡಿಸ್ಕ್ ಎಂದು ನಮೂದಿಸಲಾಗಿದೆ ಎಂದರೆ ಸರಿ. ನನಗೆ ಪರಿಣತಿ ಇರುವ ಬಗ್ಗೆ ನಿಪಿ.36 ರಲ್ಲಿ ನಮೂದಿಸಿಲ್ಲ. ತನಿಖಾಧಿಕಾರಿಯ ಕೋರಿಕೆಯ ಮೇರೆಗೆ ದಾಖಲೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ -</u>** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.